# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## <u>ಎಸ್.ಸಿ. ನಂಃ 35/2023</u>

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ವೆಂಕಟರಮಣ ರೆಡ್ಡಿ | ಫ್ರಾಸಾಃ | 04 |
| **ತಂದೆಯ ಹೆಸರುಃ** | ಸಣ್ಣಪ್ಪ | ಚಾಸಾಃ | 04 |
| **ವಯಸ್ಸುಃ** | 50 | ಪ್ರಮಾಣ ವಚನ ಭೋದಿಸಿದ ದಿನಾಂಕ | 19.07.2025 |
| **ಉದ್ಯೋಗಃ** | ರೈತ | | |
| **ವಾಸ ಸ್ಥಳಃ** | ವೈಗುಲ್ಲಾ ಹಳ್ಳಿ | | |

### <u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

ನನಗೆ ಆರೋಪಿಗಳು ಗೊತ್ತು. ಚಾಸಾ-*1* ರಿಂದ ಚಾಸಾ-*3* ನನಗೆ ಗೊತ್ತು. ಈಗ್ಗೆ *2-3* ವರ್ಷಗಳ ಹಿಂದೆ ರಾತ್ರಿ *09.00* ಸುಮಾರಿಗೆ ನಾನು ಮನೆಯಿಂದ ಅಂಗಡಿಗೆ ಬರುತ್ತಿದ್ದಾಗ ನಮ್ಮ ಊರಿನ ಸೀನಪ್ಪನಿಗೆ ಸೇರಿದ ಅಂಗಡಿಯಲ್ಲಿ ಚಾಸಾ-*1* ವ್ಯಾಪಾರ ಮಾಡುತ್ತಿದ್ದ. ಆ ಸಮಯಕ್ಕೆ ಬಜಾರ್ ಕಡೆಯಿಂದ ಆರೋಪಿತರು ಕೈಯಲ್ಲಿ ಕಟ್ಟೆಗೆ , ಚಾಕು ಮತ್ತು ಮಚ್ಚಿನಿಂದ ಚಾಸಾ-*1* ರವರ ಮೇಲೆ ಹಲ್ಲೆ ಮಾಡಿ ಹೊರಟು ಹೋದರು. ಚಾಸಾ-*1* ರವರು ತಲೆ, ಕೈ ಹಾಗೂ ದೇಹದ ಇತರ ಭಾಗಗಳ ಮೇಲೆ ರಕ್ತ ಗಾಯವಾಗಿತ್ತು. ಎಲ್ಲಾ ಆರೋಪಿತರು ಒಳಗಡೆ ನುಗ್ಗಿ ಅಂಗಡಿಯ ರೋಲಿಂಗ್ ಶಾಟರ್ ಬಂದು ಮಾಡಿ ಹಲ್ಲೆ ಮಾಡಿದರು.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿದ್ದಾರೆ. ಅನುಮತಿ ನೀಡಲಾಗಿದೆ)**

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>**

ದಿ.26.08.2022 ರಂದು ಸಂಜೆ 07.00 ಸುಮಾರಿಗೆ ಚಾಸಾ-1 ರವರು ವೆಂಕಟರಾಯಪ್ಪ ರವರ ಅಂಗಡಿಯ ಬಳಿ ನನ್ನ ಬಳಿ ಮಾತನಾಡುತ್ತ ನಿಂತಿದಾಗ ಆರೋಪಿತರು ಕೈಗಳಲ್ಲಿ ಲಾಂಗ್ , ಚಾಕು ಹಾಗೂ ದೊಣ್ಣಗಳನ್ನು ಹಿಡಿದುಕೊಂಡು ಬಂದಿದ್ದು ಚೌಡ ರೆಡ್ಡಿ ರವರನ್ನು ಅಂಗಡಿಯಗೆ ಬಂದು ಎಳೆದುಕೊಂಡು ಹೋಗಿ 1 ನೇ ಆರೋಪಿ ಮಚ್ಚಿನಿಂದ ಚಾಸಾ-1 ರವರ ತಲೆಯ ಮೇಲೆ ಹಲ್ಲೆ ಮಾಡಿದ್ದು ಕೈ ಅಡ್ಡ ಹಿಡಿದಾಗ ಬೆರಳು ಹಾಗೂ ತಲೆಯ ಭಾಗದಲ್ಲಿ ಪೆಟ್ಟಾಗಿದ್ದು , 2 ನೇ ಆರೋಪಿ ಚಾಕುವಿದನಿಂದ ತಲೆಯ ಮೇಲೆ ಹಲ್ಲೆ ಮಾಡಿ ಉಳಿದ ಆರೋಪಿಗಳು ದೊಣ್ಣೆಗಳಿಂದ ಹೊಡೆದು ರಕ್ತ ಗಾಯ ಪಡಿಸಿದ್ದನ್ನು ಕಣ್ಣಾರೆ ಕಂಡು ಪೋಲಿಸರ ಮುಂದೆ ನಾನು --------ಗುರುತಿಸುತ್ತೇನೆ ನಿಪಿ.*3* ರಂತೆ ಪೋಲಿಸರ ಮುಂದೆ ಹೇಳಿಕೆ ಕೊಟ್ಟಿದ್ದರೂ ಸಹ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಬಿ.ಆರ್.ಎಸ್ ವಕೀಲರು ಕಾಲಾವಕಾಶ ಕೋರಿದ್ದು ಸಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>**

**<u>ಮರು ವಿಚಾರಣೆಃ ..... ಇಲ್ಲ .....</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ಸಹಿ/-

**(ಕೆ.ಎಂ.ರಾಜಶೇಖರ)**

ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

ದಿಃ
19.07.2025
ಸ್ಥಳಃ ಚಿಂತಾಮಣಿ